

ಕಾರ್ಯಕ್ರಮವನ್ನು ಸಚಿವ ಬಿ.ಸಿ.ಪಾಟೀಲ ಉದ್ಘಾಟಿಸಿದರು. ಕೃಷಿ ಇಲಾಖೆ ನಿರ್ದೇಶಕಿ ನಂದಿನಿಕುಮಾರಿ, ಕುಲಪತಿ ಡಾ.ಎಸ್.ರಾಜೇಂದ್ರಪ್ರಸಾದ್ ಇದ್ದರು.

ಬೆಳೆ ವಿಮಾ ಪತ್ರ ವಿತರಣೆ

ಯಲಹಂಕ: ಪ್ರಧಾನಮಂತ್ರಿ ಫಸಲ್ ವಿಮಾ ಯೋಜನೆಯನ್ನು ರೈತರ ಮನೆ ಬಾಗಿಲಿಗೆ ತಲುಪಿಸುವ ನಿಟ್ಟಿನಲ್ಲಿ 'ನನ್ನ ಪಾಲಿಸಿ ನನ್ನ ಕೈಯಲ್ಲಿ' ಎನ್ನುವ ಬೆಳೆ ವಿಮೆ ಪಾಲಿಸಿ ವಿತರಣಾ ಅಭಿಯಾನ ಆರಂಭಿಸಲಾಗಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ತಿಳಿಸಿದರು.

ಕೃಷಿ ವಿಶ್ವವಿದ್ಯಾಲಯದ ಬಿಎಚ್‌ಎಸ್ ಕಾಲೇಜಿನಲ್ಲಿ ಅವರು ಬೆಳೆ ವಿಮೆ ಪಾಲಿಸಿ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. 'ಪ್ರಾಕೃತಿಕ ವಿಕೋಪಗಳಿಂದ ಬೆಳೆಗೆ ವಿಮಾ ಭದ್ರತೆ ಒದಗಿಸಲಾಗುವುದು. ಪ್ರಕೃತಿ ವಿಕೋಪ ಸಂಭವಿಸಿದಾಗ ರೈತರ ನೆರವಿಗೆ ಬರುವ ಯೋಜನೆ ಇದಾಗಿದೆ' ಎಂದು ವಿವರಿಸಿದರು.


'2021-22ರ ಹಿಂಗಾರು ಹಂಗಾಮಿನಲ್ಲಿ ನೋಂದಣಿ ಮಾಡಿದ ರೈತರಿಗೆ ಪಾಲಿಸಿ ವಿವರವನ್ನು 'ಇನ್‌ಲ್ಯಾಂಡ್' ಪತ್ರದ ನಮೂನೆಯಲ್ಲಿ ವಿತರಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ' ಎಂದು ತಿಳಿಸಿದರು.

ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ರಾಜೇಂದ್ರಪ್ರಸಾದ್, ಕೃಷಿ ಇಲಾಖೆ ನಿರ್ದೇಶಕಿ ನಂದಿನಿ ಕುಮಾರಿ, ಕೃಷಿ ಆಯುಕ್ತ ಬ್ರಿಜೇಶ್ ಕುಮಾರ್ ದೀಕ್ಷಿತ್ ಇದ್ದರು.

28-02-2022 Pv Pg 3A

War in world's breadbasket leaves big buyers hunting

Demand has started shifting to alternative origins including India



ÁINE QUINN & MEGAN DURISIN
BLOOMBERG

Russia's invasion of Ukraine is threatening shockwaves through two of the world's staple grain markets, prompting countries that rely on imports from the region to seek alternative supplies and heightening concerns about food inflation and hunger.

Grain exports from Russia will probably be on hold for at least the next couple of weeks, the local association said on Friday, after turmoil erupted in the Black Sea. Ukrainian ports have been closed since Thursday. That means the war has temporarily cut off a breadbasket that accounts for more than a quarter of global wheat trade and nearly a fifth of corn. Major importers are already looking at their options to buy from elsewhere, and prices for both grains swung wildly in the past two days. The disruptions come at a time when global crop prices have already soared to records, while hunger has surged dramatically in the past two years.

"There will be a big impact with respect to wheat prices and prices of bread for ordinary people," World Trade Organization Director-General Ngozi Okonjo-Iweala said Friday. Russia and Ukraine supply crops to a long list of countries around the world, including large volumes to buyers in the Middle East and Africa, who will have to look elsewhere and probably pay more for both the grain itself and the cost of shipping. Egypt, the top wheat importer, had scheduled a tender on Thursday but canceled it after only receiving one offer -- of French wheat.

"It is difficult to plan any transactions at the moment," said Eduard Zernin, the head of the Russian Union of Grain Exporters. "I think it might take a couple of weeks." Demand is beginning to shift to alternative export origins including India and the European Union, according to two people familiar with the matter.

In Tunisia, the agriculture ministry said it's looking to Uruguay, Bulgaria and Romania for supplies of soft wheat to shield itself from possible supply disruptions, while Indonesian flour mills are also hunting for other origins due to the escalating crisis. A Moroccan millers group said it would turn to Argentina, France and Poland, according to chairman Abdelkader El-Alaoui.

"It really does put a squeeze on an already tight market and creates a huge amount of uncertainty for the coming weeks if not months," said James Bolesworth, managing director at UK-based CRM AgriCommodities. "For wheat and corn, it pushes demand to other parts of the world where we know stocks are tight." In the US, the war in Ukraine may have a modest impact on food costs, though grocery inflation is likely to ease this year regardless of the conflict, said Joseph Glauber, former chief economist for the US Department of Agriculture.

28-02-2022
Dec Hrd Pg 10

For more information visit
University Library Website
Web - uasbagrilibindia.org
E-mail- librarian@uasbangalore.edu.in

ಹಣ್ಣು ಬೆಳೆದು ಹಣ್ಣಾದ ಬೆಳೆಗಾರ | ಮಾರುಕಟ್ಟೆಯಲ್ಲಿ ಕೊಳ್ಳುವವರಿಲ್ಲ | ಮಧ್ಯವರ್ತಿ ಇಲ್ಲದೆ ಏನೇನು ನಡೆಯದು


ಬೇಸಿಗೆಯಲ್ಲೂ ಬೇಡಿಕೆ ಇಲ್ಲದ ಹಣ್ಣು

♦ವೆಂಕಟೇತ ದೇಸಾಯಿ

ಬಳ್ಳಾರಿ: ಇದೀಗ ಬೇಸಿಗೆ ಆರಂಭದ ಕಾಲ. ಈಗ ಹೊಟ್ಟೆ ತಂಪು ಮಾಡುವ ಹಣ್ಣುಗಳಿಗೆ ಭಾರಿ ಬೇಡಿಕೆ ಕುದುರುವ ಕಾಲ. ನೀರಿನಂಶ ಹೆಚ್ಚಿರುವ ಕಲ್ಲಂಗಡಿ, ಪಪ್ಪಾಯ, ಸಪೋಟ, ಬಾಳೆಹಣ್ಣು ಜೀರಲ ಮತ್ತಿತರ ಹಣ್ಣುಗಳಿಗೆ ಸಖತ್ ಬೇಡಿಕೆ ಇರುತ್ತದೆ. ಆದರೆ, ಮಾರುಕಟ್ಟೆಯಲ್ಲಿ ಈ ಹಣ್ಣನ್ನು ಖರೀದಿಸುವವರಿಲ್ಲ. ಈ ಕಾರಣದಿಂದ ಬೇಡಿಕೆ ಕುಸಿತಗೊಂಡಿದೆ. ಹಣ್ಣು ಬೆಳೆದ ರೈತ ಲಾಭವಿಲ್ಲದೆ ಹೈರಾಣಾಗಿದ್ದಾನೆ.

ನೇರ ಮಾರುಕಟ್ಟೆ ವ್ಯವಸ್ಥೆ ಇಲ್ಲ: ರೈತರು ಸಾಕಷ್ಟು ಶ್ರಮವಹಿಸಿ ಹಣ್ಣು, ತರಕಾರಿ ಮತ್ತಿತರ ಬೆಳೆಯನ್ನು ಬೆಳೆಯುವರು. ಬೆಳೆದ ನಂತರ ಬೆಳೆಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಇಲ್ಲದೆ ಹೋದಲ್ಲಿ ರೈತ ಎಷ್ಟೇ ಶ್ರಮವಹಿಸಿ, ಬೆಳೆ ಬೆಳೆದಿದ್ದರೂ ವ್ಯರ್ಥವಾಗಲಿದೆ. ಮಾರುಕಟ್ಟೆ ತಂದು ಹಾಕಬೇಕು. ಇಲ್ಲಿ ಎಂದಿನಂತೆ ಮಧ್ಯವರ್ತಿಗಳ ಹಾವಳಿಗೆ ಬಲಿಯಾಗುವುದು ತಪ್ಪಿದಲ್ಲ. ತಾನೇ ಸ್ವತಃ ರಸ್ತೆ ಬದಿಯಲ್ಲಿ ಅಂಗಡಿ ಇಟ್ಟುಕೊಂಡು ಮಾರಾಟ ಮಾಡಿದರೂ ಕೂಡ ತೀರ ಕಡಿಮೆ ಬೆಳೆಗೆ ಗ್ರಾಹಕರು ಕೇಳುವರು. ಬೆಲ್ಲರೆ ವ್ಯಾಪಾರದಲ್ಲೂ ಕೂಡ ಬೆಳೆಗಾರನಿಗೆ ಸೂಕ್ತ ಲಾಭ ಲಭಿಸುತ್ತಿಲ್ಲ.

ನಿರೀಕ್ಷೆಗಳು ಸುಳ್ಳು: ರೈತರು ಹಣ್ಣು ಬೆಳೆದಿದ್ದು ಅಲ್ಲದೆ, ರಸ್ತೆ ಬದಿ ಅಥವಾ ಆಯಕಟ್ಟಿನ ಜಾಗದಲ್ಲಿ ಇಟ್ಟುಕೊಂಡು ಬೆಳಗ್ಗೆಯಿಂದ ರಾತ್ರಿ ತನಕವೂ ಮಾರಾಟ ಮಾಡಿದರೂ ಮೂರುಕಾಸು ಸಿಗುವುದಿಲ್ಲ. ಹೀಗಾಗಿ ಮಧ್ಯವರ್ತಿಗಳ ಮೂಲಕ ಮಾರಾಟ ಮಾಡಲೇಬೇಕಾದ ಅನಿವಾರ್ಯತೆ ಇದೆ. ಸಾಕಷ್ಟು ನಿರೀಕ್ಷೆ ಇಟ್ಟು ಮಾರುಕಟ್ಟೆಗೆ ಹಣ್ಣು ತಂದರೆ ಮಧ್ಯವರ್ತಿಗಳ ಮೂಲಕ ವ್ಯಾಪಾರವಾಗಲೇಬೇಕು. ಇಲ್ಲವಾದಲ್ಲಿ ರೈತರ ಬೆಳೆಗೆ ಯಾವುದೇ ಕಿಮ್ಮತ್ತಿಲ್ಲದಂತಾಗುತ್ತದೆ.



> ಹಗಲು ರಾತ್ರಿ ಕಷ್ಟಪಟ್ಟು ಬೆಳೆದ ರೈತರ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಸಿಗುತ್ತಿಲ್ಲ. ಹಣ್ಣು ಬೆಳೆಗಾರರ ಸಮಸ್ಯೆ ಹೇಳ ತೀರದು, ದಲ್ಲಾಳಿಗಳು ನಮ್ಮಿಂದ ಕಡಿಮೆ ಬೆಲೆಯಲ್ಲಿ ಖರೀದಿಸಿ, ದುಪ್ಪಟ್ಟು ಬೆಲೆಯಲ್ಲಿ ಮಾರಾಟ ಮಾಡುತ್ತಾರೆ.ಇದನ್ನು ಪ್ರಶ್ನಿಸಿದರೆ ನಾನಾ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.
> ■ ವಿರುಪಾಕ್ಷಿ, ಎಮ್ಮಿಗನೂರಿನ ರೈತ.

> ರೈತರಿಂದ ಖರೀದಿಸುವ ಬೆಲೆ ಕಡಿಮೆ ಇರಬಹುದು. ಆದರೆ, ನಮಗೂ ಕಷ್ಟಗಳಿವೆ. ರೈತರಿಗೆ ಒಂದೇ ಬಾರಿಗೆ ಹಣ ಪಾವತಿಸಬೇಕು. ನಾವು ಮಾರಾಟವಾದ ಬಳಿಕ ಹಾಕಿದ ಬಂಡವಾಳ ನಿರೀಕ್ಷಿಸಬೇಕು. ಹಣ್ಣು ಕೊಳೆಯುವುದು, ಬೆಲೆ ಏರುಪೇರು ಮತ್ತಿತರ ಕಾರಣದಿಂದ ಕೆಲವೊಮ್ಮೆ ಹಾಕಿದ ಬಂಡವಾಳ ವಾಪಸ್ ಬಾರದೆ ನಷ್ಟ ಅನುಭವಿಸಿದ್ದೇವೆ.
> ■ ಹನುಮಂತಪ್ಪ, ಮಾರಾಟಗಾರರು ಬಳ್ಳಾರಿ.

ಕಲ್ಲಂಗಡಿ, ಎಳನೀರಿಗೆ ಬೇಡಿಕೆ

ಬೇಸಿಗೆಯಲ್ಲಿ ಕಲ್ಲಂಗಡಿ ಮತ್ತು ಎಳನೀರಿಗೆ ಬಹಳ ಬೇಡಿಕೆ ಇರುತ್ತದೆ. ಹಾಗೆಯೇ ದಿಢೀರ್ ಎಂದು ಇವುಗಳ ಬೆಲೆಯೂ ಏರಿಕೆಯಾಗುತ್ತದೆ. ಗ್ರಾಹಕರು ಕೇಳಿದರೆ ಇದು ಇಲ್ಲಿಯ ಹಣ್ಣಲ್ಲ, ಪುಣೆ, ಸೊಲ್ಲಾಪುರದಿಂದ ತರಿಸಿದ್ದೇವೆ. ಮಂಡ್ಯ, ಮೈಸೂರು ಎಳನೀರು ಎನ್ನುತ್ತಾ ಜನರನ್ನು ಸುಲಿಯುವರು. ಮಾರುಕಟ್ಟೆಯಲ್ಲಿ ಕಲ್ಲಂಗಡಿ ಹಣ್ಣಿಗೆ ಕೆಜಿಗೆ 30-35 ರೂ.ಬೆಲೆ ಇದೆ. ಇದೇ ಹಣ್ಣನ್ನು ರೈತರಿಂದ ಕೆಜಿಗೆ 7ರಿಂದ 8 ರಂತೆ ಖರೀದಿಸುವರು. ಅಂದರೆ ಐದು ಪಟ್ಟು ಲಾಭ ಇಟ್ಟುಕೊಂಡು ಗ್ರಾಹಕರಿಗೆ ಮಾರಾಟ ಮಾಡುವರು. ಪಪ್ಪಾಯ, ಸಪೋಟ, ಜೀರಲ, ಅಂಜೂರ, ದ್ರಾಕ್ಷಿ, ಸೇಬು, ಬಾಳೆಹಣ್ಣು ಹೀಗೆ ಎಲ್ಲ ಹಣ್ಣುಗಳ ಬೆಲೆಯೂ ಇದೇ ರೀತಿ ಇದೆ. ರೈತನಿಗೆ ಮೂರ್ನಾಲ್ಕು ತಿಂಗಳು ಬೆವರು ಹರಿಸಿದ್ದಕ್ಕೆ ಸಿಗುವುದು ಪುಡಿಗಾಸು. ದಲ್ಲಾಳಿಗಳು ತಾಸುಗಳಲ್ಲಿ ಜೇಬುತುಂಬ ಲಾಭ ಗಳಿಸುವರು.

ತಳ್ಳುವಗಾಡಿ, ಬೀದಿಬದಿ ವ್ಯಾಪಾರಸ್ಥರಿಗೆ ದುಪ್ಪಟ್ಟು ಬೆಲೆಗೆ ಮಾರಾಟ

ಕೆಲವು ರೈತರು ತಾವು ಬೆಳೆದ ಬೆಳೆಯನ್ನು ಜಮೀನ ನಿನಲ್ಲೇ ಮಾರಾಟ ಮಾಡುವರು. ರೈತರಿಗೆ ಮಾರುಕಟ್ಟೆಯಲ್ಲಿ ನಡೆಯುವ ಧಾರಣೆ



ಬಗ್ಗೆ ಸಾಕಷ್ಟು ಅರಿವು ಇರುವುದಿಲ್ಲ. ಇಲ್ಲೂ ಕೂಡ ಕೋವಿಡ್‌ನಿಗೆಳಗಾಗುವನು. ಅನಿವಾರ್ಯವಾಗಿ ಮಾರಾಟ ಗಾರರು ಕೇಳಿದ ಬೆಲೆಗೆ ಕೊಟ್ಟು ಕೈತೊಳೆದು ಕೊಳ್ಳ ಬೇಕಾಗುತ್ತದೆ. ತಳ್ಳುವಗಾಡಿ, ಬೀದಿಬದಿ ವ್ಯಾಪಾರಸ್ಥರಿಗೆ ದುಪ್ಪಟ್ಟು ಬೆಲೆಗೆ ಮಾರಾಟ ಮಾಡುವ ದಲ್ಲಾಳಿಗಳು ಹೆಚ್ಚಿನ ಲಾಭ ಗಳಿಸುವರು.

28-02-2022 Hd Pg 04

28-02-2022 Vsv Pg 12

ಬೆಳೆ ಇಳುವರಿ, ಬೆಲೆ ಎರಡೂ ಇಲ್ಲದೇ ಕೈಸುಟ್ಟುಕೊಳ್ಳುತ್ತಿರುವ ರೈತರು

ನೆಲ ಕಚ್ಚಿದ ಶುಂಠಿ, ಟೊಮೇಟೊ ಬೆಲೆ: ರೈತರಿಗೆ ಶುರುವಾದ ಸಂಕಟ

ನಿ ಹೂವಪ್ಪ ಐ.ಎಚ್ ಬೆಂಗಳೂರು

ಪ್ರಸಕ್ತ ಸಾಲಿನಲ್ಲಿ ಶುಂಠಿ ಹಾಗೂ ಟೊಮೇಟೊ ಬೆಳೆದ ರೈತರು ಕೈ ಸುಟ್ಟುಕೊಳ್ಳುತ್ತಿದ್ದಾರೆ. ಬೆಲೆ ಇಲ್ಲದೆ, ಈ ಕಡೆ ಇಳುವರಿಯೂ ಇಲ್ಲದೇ ಸಂಕಟ ಪಡುತ್ತಿದ್ದಾರೆ.

ಶುಂಠಿ ಸಗಟು 60 ಕೆ.ಜಿ. ಚೀಲಕ್ಕೆ 700-900 ರು. ಗೆ ಮಾರಾಟವಾಗುತ್ತಿದೆ. ಮುಂದಿನ ದಿನಗಳಲ್ಲಿ ಬೆಲೆ ಏರಿಕೆಯಾಗಬಹುದೆಂಬ ನಿರೀಕ್ಷೆಯಲ್ಲಿ ಶುಂಠಿ ದಾಸ್ತಾನು ಇಟ್ಟುಕೊಂಡಿದ್ದ ರೈತರು ಬೆಲೆ ಏರಿಕೆಯಾಗದಿರುವುದರಿಂದ, ವಿಧಿ ಇಲ್ಲದೆ ಮಾರಾಟ ಮಾಡಿ ಕೈ ತೊಳೆದುಕೊಂಡಿದ್ದಾರೆ. ಕಳೆದ ಸಾಲಿನಲ್ಲಿ ಶೇ.90ರಷ್ಟು ಇದ್ದ ಇಳುವರಿ, ಅತಿವೃಷ್ಟಿಯಿಂದಾಗಿ ಶೇ.70ರಷ್ಟು ಕುಸಿದಿದೆ.

ಉತ್ತರಪ್ರದೇಶ, ಮಹಾರಾಷ್ಟ್ರ ಹಾಗೂ ಪಶ್ಚಿಮ ಬಂಗಾಳಕ್ಕೆ ಶುಂಠಿ ಸರಬರಾಜಾಗುತ್ತಿದ್ದು, ಚಳಿಗಾಲ ಮತ್ತು ಮಳೆಗಾದಲ್ಲಿ ಜನರು ಶುಂಠಿ ಬಳಸುವುದು ಹೆಚ್ಚು. ಈಗ ಬೇಸಿಗೆ ಶುರುವಾಗಿದ್ದು, ಬೇಡಿಕೆ ಇಲ್ಲ. ಪರಿಣಾಮ ಶುಂಠಿಗೆ ಬೆಲೆ ಏರಿಕೆ ಸಂಭವ ಕಡಿಮೆ ಎಂದು ವ್ಯಾಪಾರಿಗಳು ಹೇಳುತ್ತಾರೆ.

ಮಹಾರಾಷ್ಟ್ರದ ಔರಂಗಾಬಾದ್ ಶುಂಠಿಯು ಶಿವಮೊಗ್ಗ, ಸಾಗರ, ಶಿಕಾರಿಪುರ, ಆನಂತಪುರ ಹಾಗೂ ಇತರೆ ಒಣ ಶುಂಠಿ ಉತ್ಪಾದಕರಿಗೆ ದಿನ ಪ್ರತಿ ಅಂದಾಜು 700-800 ಟನ್‌ನಷ್ಟು ಬರುತ್ತಿದೆ. ಸ್ಥಳೀಯ ಬೆಲೆಯಲ್ಲೇ 900- 1,000 ರು. ಗೆ ಪೂರೈಕೆಯಾಗುತ್ತಿದೆ. ಈ ಶುಂಠಿ ಸಿಪ್ಪೆ ತೆಳ್ಳಗೆ ಇರುವುದರಿಂದ ಒಣ ಶುಂಠಿ ತಯಾರಿಸಲು ಅನುಕೂಲವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಶುಂಠಿ ಬೇಡಿಕೆ ಹಾಗೂ ಬೆಲೆ ಕುಸಿಯಲು ಇದು ಕಾರಣವಾಗಿದೆ ಎನ್ನುತ್ತಾರೆ ಶಿಕಾರಿಪುರ ತಾಲೂಕು ಸವಳಂಗ ಗ್ರಾಮದ ಸೋಮನಾಯಕ್.

ಹಾಸನ, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಅತಿ ಹೆಚ್ಚು ಶುಂಠಿ ಬೆಳೆಯುತ್ತಿದ್ದು, ಕರ್ನಾಟಕದಲ್ಲಿ ಇತ್ತೀಚಿನ ವರ್ಷಗಳಲ್ಲಿ ಶುಂಠಿ ಬೆಳೆ ಹಿಂದಿಗಿಂತ ದುಪ್ಪಟ್ಟಾಗಿದೆ. ಹೀಗಾಗಿ ಶುಂಠಿ ದಾಸ್ತಾನು ಹೆಚ್ಚಾಗಿದೆ. ಮಾರುಕಟ್ಟೆಗೆ ಬೇಡಿಕೆಗಿಂತ



ಪೂರೈಕೆ ಹೆಚ್ಚಾದ ಹಿನ್ನೆಲೆಯಲ್ಲಿ ಬೆಲೆ ಇಳಿಕೆಗೆ ಪ್ರಮುಖ ಕಾರಣವಾಗಿದೆ. ಶುಂಠಿ ಬೆಳೆಗೆ ಅತಿ ಹೆಚ್ಚು ಖರ್ಚು ಬರುತ್ತಿದ್ದು, ಇದನ್ನು ಲೆಕ್ಕಿಸದೆ ರೈತರು ಹೆಚ್ಚು ಹೆಚ್ಚು ಬೆಳೆದು ಕೈ ಸುಟ್ಟುಕೊಳ್ಳಲು ಕಾರಣವಾಗುತ್ತಿದ್ದಾರೆಂದು ಹೇಳುತ್ತಾರೆ ಹಾಸನ ತಾಲೂಕು ಯೋಗಿಹಳ್ಳಿ ಚೇತನ್.

ಬೆಳೆಗೆ ಉಪಯೋಗಿಸುವ ಡಿಎಪಿ ಸುಫಲ 50 ಕೆ.ಜಿ. ಚೀಲಕ್ಕೆ 1,700-1,800 ರು. ಏರಿಕೆಯಾಗಿದೆ. ಕೊಟ್ಟಿಗೆ ಗೊಬ್ಬರ 1 ಟ್ರಾ್ಯಕ್ಟರ್‌ಗೆ 4,000 ರು., ಕಳೆ ಕೀಳಲು 400-600 ರು. ಜತೆಗೆ ಎಲ್ಲಾ ಔಷಧಿಗಳೂ ದುಬಾರಿಯಾಗಿವೆ. ಎಕರೆಗೆ ಕನಿಷ್ಠ 2.5- 3 ಲಕ್ಷ ರು. ವೆಚ್ಚವಾಗುತ್ತಿದೆ. ಕನಿಷ್ಠ 400-450 ಚೀಲಗಳಷ್ಟು ಇಳುವರಿ ಬರಬೇಕು. ಆದರೆ, 200-250 ಚೀಲ ಬರುವುದೇ ಹೆಚ್ಚಾಗಿದೆ. ಈಗಿನ ಬೆಲೆ ಮಾರಾಟ ಮಾಡಿದರೆ ಲಾಭ ಬರುವುದು ಇರಲಿ ಬೆಳೆಗೆ ಮಾಡಿದ ವೆಚ್ಚವೂ ಬರುವುದಿಲ್ಲ ಎಂದು ರೈತರು ಅಳಲು ತೋಡಿಕೊಳ್ಳುತ್ತಾರೆ.

> ಮೂರು ತಿಂಗಳ ಹಿಂದೆ ಟೊಮೇಟೋ ಕೆಜಿಗೆ 80-90 ರು.ಗೆ ಮಾರಾಟವಾಗಿತ್ತು. ಮುಂದಿನ ದಿನಗಳಲ್ಲಿ ಕೆಜಿಗೆ 20-30 ರು. ಸಿಕ್ಕರೆ ಸಾಕು ಅಂತ ಬೆಳೆದೆವು. ಈಗ ನೋಡಿದರೆ ಕೆಜಿಗೆ 2-3 ರು.ಗೆ ಕೇಳುವರಿಲ್ಲ
> - ಕೆ. ಶ್ರೀನಿವಾಸ್, ಚಿಕ್ಕಬಳ್ಳಾಪುರ ರೈತ

> ಹರ್ಯಾಸ ಎಂದರೆ ರೈತರಿಗೆ 60 ಕೆಜಿ ಚೀಲಕ್ಕೆ ಸಗಟು ಮಾರಾಟದ ಬೆಲೆ 700-900 ರು., ಅಂದರೆ ಕೆಜಿಗೆ 12-15 ರು. ಅದೇ ಚಿಲ್ಲರೆ ಕೆಜಿಗೆ 60-70 ರು. ಮಾರಾಟವಾಗುತ್ತಿದೆ. ಈ ಕಡೆ ಗ್ರಾಹಕರಿಗೆ ಲಾಭ ಇಲ್ಲ, ರೈತರಿಗೂ ಲಾಭ ಇಲ್ಲ. ಮಧ್ಯವರ್ತಿಗಳಿಗೆ ಮಾತ್ರ ಲಾಭ.
> - ಬೋರೇಗೌಡ, ಎನ್. ಬಿನ್ನೇನಹಳ್ಳಿ, ಹಾಸನ ತಾಲೂಕು

ಇನ್ನು ಶುಂಠಿ ಬೆಳೆಗಾರರಿಗಿಂತ ಟೊಮೇಟೊ ಬೆಳೆಗಾರರ ಸ್ಥಿತಿ ಹಿನಾಯವಾಗಿದೆ. ಬೆಳೆಗೆ ಮಾಡಿದ ವೆಚ್ಚ ಬರುವುದಿರಲಿ, ಕಟಾವು ಮಾಡಿ ಮಾರುಕಟ್ಟೆಗೆ ಸಾಗಿಸಿದ ಗಾಡಿ ಬಾಡಿಗೆಯೂ ಬರುತ್ತಿಲ್ಲ. ಬೆಂಗಳೂರು ಮಾರುಕಟ್ಟೆಯಲ್ಲಿ ನಾಟಿ ಟೊಮೇಟೊ ಸಗಟು 12 ಕೆಜಿ ಬಾಕ್ಸ್‌ಗೆ 50-60 ರು., ಹೈಬ್ರಿಡ್ 70-80 ರು., ಅಂದರೆ ಕೆಜಿಗೆ 4-7 ರು., ಚಿಲ್ಲರೆ 8-10 ರು. ಮಾರಾಟವಾಗುತ್ತಿದೆ. ಮಹಾರಾಷ್ಟ್ರ, ದೆಹಲಿ, ಮುಂಬೈ, ಪಶ್ಚಿಮ ಬಂಗಾಲಗಳಿಗೆ ಹೋಗುತ್ತಿದ್ದ ಟೊಮೇಟೊ ಬೇಡಿಕೆ ಕುಸಿದಿದೆ. 3 ತಿಂಗಳ ಹಿಂದೆ ಕೆಜಿಗೆ 80-100 ರು. ಗೆ ಮಾರಾಟವಾಗಿದ್ದನ್ನು ನೋಡಿದ್ದ ರೈತರು, ಈ ಬಾರಿ ವಿಪರೀತ ಟೊಮೇಟೊ ಬೆಳೆದಿದ್ದಾರೆ. ಹೀಗಾಗಿ ಮಾರುಕಟ್ಟೆಯಲ್ಲಿ ಬೇಡಿಕೆಗಿಂತ ಪೂರೈಕೆ ಹೆಚ್ಚಾಗಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ. ರಾಜ್ಯದ ಟೊಮೇಟೊ ಜತೆಗೆ ಆಂಧ್ರಪ್ರದೇಶದ ಟೊಮೇಟೊ ಬರುತ್ತಿರುವುದರಿಂದ ಬೇಡಿಕೆ ಹಾಗೂ ಬೆಲೆ ಕುಸಿಯಲು ಪ್ರಮುಖ ಕಾರಣ ಎನ್ನುತ್ತಾರೆ ಎಪಿಎಂಸಿ ತರಕಾರಿ ವರ್ತಕರ ಸಂಘದ ನಿರ್ದೇಶಕ ದೇವರಾಜ.